ಎಲ್ಲರೂ ಅವರವರ ಕೆಲಸದಲ್ಲಿ ಬಿಜಿಯಾಗಿರುವಾಗ ಸುಲಭಕ್ಕೆ ಸಿಗುವುದು ನಾ ಒಬ್ಬಳೆನಾ? ಹೀಗೆ ತರಹೇವಾರಿ ಯೋಚನೆಯಲ್ಲಿ ತಲೆಕೆಟ್ಟು ಗೊಬ್ಬರ ಆಗುತ್ತಿರುವ ಹೊತ್ತಿಗೆ ಅದೋ ಸಂಘಟಕರು ಬಂದೇ ಬಿಟ್ಟರು. ಕಾರಿನಿಂದಿಳಿದು ನೇರಾ ಪಡಸಾಲೆಗೆ ಬಂದು ಪವಡಿಸಿದರು. ಪರಿಚಯಿಸಿಕೊಂಡು ನೇರಾ ವಿಷಯಕ್ಕೇ ಬಂದು ಬಿಟ್ಟರು.

'ನೋಡಿ ಮೇಡಂ... ಎಲ್ಲಾ ಕಡೆ ಈಗ ಅರಾಜಕತೆ ಶುರುವಾಗಿದೆ, ಶಾಂತಿ ನಾಶ ಆಗಿದೆ. ಮುಂದೊಂದು ದಿನ ಮೂರನೇ ಮಹಾಯುದ್ಧ ಬರುವುದನ್ನು ನಾವು ತಪ್ಪಿಸಬೇಕಿದೆ. ಆ ನಿಟ್ಟಿನಲ್ಲಿ ನಾವು 'ಶಾಂತಿ ಮತ್ತು ಸೌಹಾರ್ದ' ಅಂತ ಟಾಪಿಕ್ ಇಟ್ಟಿದ್ದೇವೆ. ನೀವು ಈ ವಿಚಾರದ ಕುರಿತು ಮಾತನಾಡಬೇಕು ಅಷ್ಟೆ. ಇದು ಸಿಂಪಲ್. ನೀವು ಮಾತಾಡಬಲ್ಲಿರಿ ಅಂತ ನನ್ನ ಹುರಿದುಂಬಿಸುತ್ತಿದ್ದಾರೆ.

'ವಿಷಯ ಚೆನ್ನಾಗಿದೆ. ಆದರೆ, ಮಾತಾಡುವುದು ತುಸು ಕಷ್ಟ. ಮಾತು ಪರಿಣಾಮಕಾರಿಯಾಗಿರಬೇಕು. ಅಂತಹವರನ್ನ ಕರೆಯಿಸಿ' ಅಂತ ಉಚಿತ ಸಲಹೆ ಕೊಟ್ಟೆ.

'ನೋಡಿ, ನಾವು ನಿಮಗೆ ಮೊದಲ ಆದ್ಯತೆ ಕೊಡುತ್ತಿದ್ದೇವೆ. ಯೋಚಿಸಲಿಕ್ಕೆ ಎರಡು ದಿನ ಸಮಯ ಕೊಡುತ್ತೇವೆ. ಅವಸರ ಇಲ್ಲ, ನಂತರ ಹೇಳಿ' ಅಂತ ನನ್ನ ತಲೆಗೆ ಹುಳ ಬಿಟ್ಟು ಹೊರಟೇ ಬಿಟ್ಟರು. ನನ್ನೊಳಗಿನ ಶಾಂತಿ ಕದಡಲು ಶುರುವಾಯಿತು.

ಶಾಂತಿ ಮತ್ತು ಸೌಹಾರ್ದದ ಸಮನ್ವಯತೆಯನ್ನು ಎಲ್ಲಿಂದ ಶುರು ಮಾಡಬೇಕು?

ಮೊದಲೆಲ್ಲಾ ನನ್ನ ಎರಡು ಮಕ್ಕಳು ಮನೇಲಿ ಇರುವಾಗ ದಿನಾ ಜಗಳ ಕಿತ್ತಾಟ ಇರುತ್ತಿತ್ತು. ಈಗ ದೊಡ್ಡವರಾಗಿ ಅವರಿಬ್ಬರು ಓದಲು ದೂರದ ಊರುಗಳಿಗೆ ಹೋದ ಮೇಲೆ ಮನೆಯಲ್ಲಿ ಶಾಂತಿ ನೆಲೆಸಿ ಅವರೊಳಗೂ ಸೌಹಾರ್ದತೆ ಬಲಿತಿದೆ. ಇನ್ನು ಮನೆಯಲ್ಲಿ ಇರುವ ನನಗೂ ಮತ್ತು ಅತ್ತೆ ಇಬ್ಬರಿಗೂ ಕತ್ತೆ ಪ್ರಾಯ ಆಗಿ ಸುಮ್ಮಗೆ ಒಬ್ಬರ ಮೇಲೊಬ್ಬರು ಹರಿ ಹಾಯ್ದು ಕಿತ್ತಾಡುವುದಕ್ಕಿಂತ ಒಬ್ಬರಿಗೊಬ್ಬರು ಹೊಂದಾಣಿಕೆಯಲಿ ಬದುಕುವುದೇ ಲೇಸು ಅನ್ನುವುದನ್ನ ಕಾಲ ಕಲಿಸಿದ ಮೇಲೆ ಅಶಾಂತಿಯ ಗೂಡಾಗಿದ್ದ ಮನೆಯಲ್ಲಿ ಶಾಂತಿ ಮನೆ ಮಾಡಿದೆ. ಇನ್ನು ದೇಶದ ಸಮಸ್ಯೆಯ ಕುರಿತು ಪುಟಗಟ್ಟಲೆ ಬರೆದು



ಉರು ಹೊಡೆದು ಮಾತನಾಡುವಷ್ಟು ಸಮಯ ವ್ಯವಧಾನ ನನ್ನಲ್ಲಿ ಎಲ್ಲಿ ಉಳಿದಿದೆ? ಈಗ ಈ ಎರಡು ದಿನದ ಒಳಗೆ ಏನು ಉತ್ತರ ಕೊಡಲಿ ಅಂತ ತಲೆ ಕೆಡಿಸಿಕೊಳ್ಳುತ್ತಿರುವೆ. ಭಾಷಣ ಮಾಡಿ ಸಾಮಾಜಿಕ ಜವಾಬ್ದಾರಿ ಹೆಚ್ಚಿಸಿಕೊಳ್ಳಲಾ? ಎಲ್ಲ ಮರೆತು ಮನೆಯಲ್ಲಿ ನೆಮ್ಮದಿಯಾಗಿ ಹಾಯಾಗಿರಲಾ ಎಂದು ಯೋಚನೆಗೆ ಬಿದ್ದಿರುವೆ.

ಅಂಗಳದಲ್ಲಿ ಹಾರುತ್ತಿರುವ ಪುಟ್ಟ ನೀಲಿ ಹಕ್ಕಿಯೂ ನೆಲ್ಲಿ ಮರದ ಮೇಲೆ ಕುಳಿತ ಕಾಗೆಯೂ ಒಂದೇ ಸಮಯಕ್ಕೆ ಹಾರಿಬಂದು ಅಂಗಳದ ಬದಿಯ ನೀರಿನ ತೊಟ್ಟಿಗೆ ಕೊಕ್ಕಿಳಿಸಿವೆ. ಇವರು ಯಾರ ಭಾಷಣ ಕೇಳಿ ಬಂದು ಈ ರೀತಿ ಒಂದೇ ತೊಟ್ಟಿಯ ನೀರು ಕುಡಿಯುವುದು? ಅನ್ನುವುದರ ಬಗ್ಗೆ ವಿಪರೀತ ಕುತೂಹಲವಿದೆ ನನಗೆ. ಅವರಿಂದ ಉತ್ತರ ದಕ್ಕುವುದಿಲ್ಲವೆಂದು ಗೊತ್ತಿದ್ದರೂ ಇದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದೆ. ನನ್ನ ಮಾತು ಕೇಳಿ ಅವು ಪುರ್ರನೆ ಹಾರಿ ಹೋದವು. 'ಮೂಗನ ಮಾಡಯ್ಯ ತಂದೆ...' ಅಂತ ಮೊದಲ ಬಾರಿಗೆ ಪದ್ಯವೊಂದ ಗೊಣಗಿಕೊಂಡೆ.

●